ರಾಜ್ಯ ಮಾನ್ಯ ಶಾಸಕರ ಅಭಿಪ್ರಾಯಗಳನ್ನು ಸಂಪೂರ್ಣವಾಗಿ ಮನ್ನಣೆ ಮಾಡುತ್ತೇವೆ ಗಿರಿಜನರಿಗೆ ಆದಂತಹ ತೊಂದರೆಯನ್ನೂ ಕೂಡ ನಾವು ತಪ್ಪಿಸುತ್ತೇವೆ. ಈ ವಿಚಾರದಲ್ಲಿ ತಾವು ರಚನಾತ್ಮಕವಾದಂತಹ ಸಲಹೆಗಳು ಇದ್ದರೆ ಅದರ ಬಗೆ ಕೂಡಲೇ ಮಾನ್ಯ ಮುಖ್ಯಮಂತ್ರಿಗಳು ಒಂದು ಸಭೆಯನ್ನು ಕರೆದು ಅದರ ಮೂಲಕ ಅವರ ಸಂಕಷ್ಟಗಳನ್ನು ಪರಿಹಾರ ಮಾಡುತ್ತಾರೆ

ಸಭಾಧ್ಯಕ್ಷರು ಮಾನ್ಯ ವಾಟಾಳ್ ನಾಗರಾಜ್ ಅವರು ತಮ್ಮ ಆಸನಕ್ಕೆ ಹಿಂದುರಗಬೇಕು ಮಾನ್ಯ ಮುಖ್ಯಮಂತ್ರಿಗಳು ಬಂದಾಗ ಅದರ ಬಗ್ಗೆ ಹೇಳಿಕೆಯನ್ನು ಕೊಡುತ್ತೇವೆಂದು ಹೇಳಿದ್ದಾರೆ

(ಇ) ವಿಷಯ ಉತ್ತರ ಕರ್ನಾಟಕದ ಭಾಗದಲ್ಲಿ ಹೃದ್ರೋಗ ಆಸ್ಪತ್ರೆ ಪ್ರಾರಂಭಿಸುವ ಬಗ್ಗೆ

†ಶ್ರೀ ಜೆ ವಿ ಶ್ರೀರಾಮರೆಡ್ಡಿ (ಬಾಗೇಪಲ್ಲಿ) ಮಾನ್ಯ ಅಧ್ಯಕ್ಷರೆ, ಮಾನ್ಯ ವಾಟಾಳ್ ನಾಗರಾಜ್ ಬಾವಿಯಲ್ಲಿ ಕುಳಿತಿದ್ದಾರೆ ಅವರ ಬೇಡಿಕೆ ಸರ್ಕಾರ ಈಡೇರಿಸಬೇಕು ಏಕೆಂದರೆ ಸುಮಾರು ವರ್ಷಗಳಿಂದ ಇದೆ ಅದರ ಜೊತೆಗೆದ ನಾನು ಒಂದು ಸಲಹೆಯನ್ನು ಸರ್ಕಾರಕ್ಕೆ ಹೇಲುವುದೇನೆಂದರೆ ಹೈಕೋರ್ಟ್ ಪೀರ ಉತ್ತರ ಕರ್ನಾಟಕದಲ್ಲಿ ಎಷ್ಟು ಮುಖ್ಯ ಇದೆಯೋ ಹಾಗೆ ಹೃದ್ರೋಗ ಆಸ್ಪತ್ರೆ ಆ ಭಾಗದಲ್ಲಿಬೇಕಾಗಿದ್ದು ಸರ್ಕಾರ ಅಲ್ಲಿ ಸ್ಥಾಪನೆ ಮಾಡಬೇಕು ಏಕೆಂದರೆ ಹೈಕೋರ್ಟ್ ಕೇಸ್ ಬೇಕಾದರೆ ಒಂದು ವಾರ ನಿಧಾನವಾದರೂ ಪರವಾಗಿಲ್ಲ ಆದರೆ ಹೃದ್ರೋಗಿಗಳು ನಿಮಿಷದಲ್ಲಿ ಸಾಯುತ್ತಾರೆ ಅಂತಹ ವ್ಯವಸ್ಥೆ ಇವತ್ತು ಉತ್ತರ ಕರ್ನಾಟಕದಲ್ಲಿ ಇಲ್ಲ ಇಡೀ ಉತ್ತರ ಕರ್ನಾಟಕ, ಹೈಕೋರ್ಟ್ ಕರ್ನಾಟಕ ಮತ್ತು ಬಂಬೆ ಕರ್ನಾಟಕ ಪ್ರದೇಶದಲ್ಲಿ ಕಾರ್ಡಿಯಾಲಜಿ ಸ್ಪೆಷಲೈನೇಷನ್ ಜಯದೇವ ಹೃದ್ರೋಗ ಆಸ್ಪತ್ರೆಯಲ್ಲಿ ಸರ್ಕಾರದವರು ಸ್ಥಾಪನೆ ಮಾಡಿದರೆ ಅದು ಬಹಳ ಉಪಯೋಗವಾಗುತ್ತದೆ ಅದಕ್ಕೆ ಸರ್ಕಾರ ಕೂಡ ಇದನ್ನು ಪರಿಗಣನೆ ಮಾಡತಕ್ಕಂಥ ಅವಶ್ಯಕತೆ ಇದೆ ಏಕೆಂದರೆ ಬಡ ರೋಗಿಗಳು ಬೆಂಗಳೂರಿಗೆ ಬರುವುದಕ್ಕೆ ಕಷ್ಟವಾಗುತ್ತದೆ ಆ ಕಡೆಯ ಬಡ ರೋಗಿಗಳು ಬೆಂಗಳೂರಿಗೆ ಬಂದು, ಜಯದೇವ ಇನ್ಸಿಟ್ಯೂಟ್ ನಲ್ಲಿ ನೋಡಿಸಿಕೊಳ್ಳುವಂತಹ ಸ್ಥಿತಿಯಲ್ಲಿ ಇಲ್ಲ, ಇದು ಬಹಳ ಮುಖ್ಯವಾದಂತಹ ಅಂಶವಾಗಿದೆ, ಇದನ್ನು ಸಹ ಸರ್ಕಾರವೂ ಪರಿಗಣಿಸಬೇಕು, ಮಾನ್ಯ ವಾಟಾಳ್ ನಾಗರಾಜ್‌ರವರು ಏನು ಹೇಳಿದ್ದಾರೆ, ಅದರ ಬಗ್ಗೆ ಕ್ರಮ ತೆಗೆದುಕೊಳ್ಳಬೇಕು, ದಯವಿಟ್ಟು ಮಾನ್ಯ ವಾಟಾಳ್ ನಾಗರಾಜ್‌ರವರು ತಮ್ಮ ಸ್ಥಾನಕ್ಕೆ ಬಂದರೆ ಒಳ್ಳೆಯದೆಂದು, ನಾಣೂ ಸಹ ಅವರಲ್ಲಿ ಮನವಿಯನ್ನು ಮಾಡುತ್ತೇನೆ

(ಈ) ವಿಷಯ ಗುಲ್ಬರ್ಗ ಜಿಲ್ಲೆಯಲ್ಲಿ ಆನೆಕಾಲು ರೋಗ ದಾಖಲಾಗಿರುವ ಬಗ್ಗೆ

ಶ್ರೀ ಎಂ ವೈ. ಪಾಟೀಲ್ (ಅಫ್ಜಲ್‌ಪುರ್) ಮಾನ್ಯ ಅಧ್ಯಕ್ಷರೇ, ಗುಲ್ಬರ್ಗ ಜಿಲ್ಲೆಯಲ್ಲಿ " ಆನೆಕಾಲು ರೋಗ ಬಹಳ ಇದೆ, 4,680 ಕೇಸ್ ರಿಜಿಸ್ಟರ್ ಆಗಿ ಬೆಳಕಿದೆ ಬಂದಿದೆ, ಇನ್ನು ಆಸ್ಪತ್ರೆಗೆ ಬರದೇ ಇರುವಂತಹ ಇನ್ನು ಬಹಳಷ್ಟು ಕೇಸ್‌ಗಳು ಇವೆ, ಈ ವಿಚಾರವಾಗಿ ಸರ್ಕಾರವೂ ತೀವ್ರವಾಗಿ ಕ್ರಮವನ್ನು ತೆಗೆದುಕೊಳ್ಳ ಬೇಕು, ಮತ್ತು ಈ ರೋಗ ಹೆಚ್ಚಿಗೆ ಹರಡದಂತೆ ನೋಡಿಕೊಳ್ಳಬೇಕು ಮತ್ತೆ ಅಫಜಲ್‌ಪುರ್ ತಾಲ್ಲೂಕ್‌ನಲ್ಲಿ ಒಂದು ಡೆತ್ ಆಗಿದೆ, ಚಿಂಚೋಳಿಯಲ್ಲಿ ಒಂದು ಡೆತ್ ಆಗಿದೆ, ಮತ್ತೆ ಆಸ್ಪತ್ರೆಗಳಲ್ಲಿ ಡಾಕ್ಟರ್‌ಗಳು ಇಲ್ಲ, ಈ ಬಗ್ಗೆ ಉದಾಹರಣೆಗಾಗಿ ಹೇಳುವುದಾದರೆ, ಅ ಫಜಲ್‌ಪುರ ತಾಲ್ಲೂಕಿನಲ್ಲಿ ಎರಡು ಆಸ್ಪತ್ರೆಗಳಲ್ಲಿ ಡಾಕ್ಟರ್‌ಗಳು ಇಲ್ಲ, ಸಿಬ್ಬಂದಿಗಳು ಇಲ್ಲ, ಕಡಚಿಗಿ ಮತ್ತು ಉಡಚಾಣದಲ್ಲಿ ಡಾಕ್ಟರ್‌ಗಳು ಇಲ್ಲ ಸಿಬ್ಬಂದಿಗಳು ಇಲ್ಲ, ಈ ರೀತಿಯಾದರೆ ಆಸ್ಪತ್ರೆಗಳು ಇದ್ದು, ಏನು ಪ್ರಯೋಜನ? ಆದುದರಿಂದ ಸರ್ಕಾರ ಈ ವಿಷಯದ ಬಗ್ಗೆ ಹೇಳಿಕೆ ನೀಡಬೇಕೆಂದು, ತಮ್ಮ ಮುಖಾಂತರ ಸರ್ಕಾರವನ್ನು ಕೇಳಿಕೊಳ್ಳತ್ತೇನೆ

ಶ್ರೀ ಎಂ ಪಿ ಪ್ರಕಾಶ್ (ಕಂದಾಯ ಮತ್ತು ಸಂಸದೀಯ ವ್ಯವಹಾರಗಳ ಸಚಿವರು) ಮಾನ್ಯ ಅಧ್ಯಕ್ಷರೇ, ಮಾನ್ಯ ಜಿ ವಿ ಶ್ರೀರಾಂರೆಡ್ಡಿಯವರು ಬಹಳ ಮುಖ್ಯವಾದಂತಹ ವಿಚಾರವನ್ನು ಪ್ರಸ್ತಾಪ ಮಾಡಿದ್ದಾರೆ, ಅವರಿಗೆ ಮಾಹಿತಿಯ ಅಭಾವವಿರಬಹುದು, ಓಪಕ್ ದೇಶದಿಂದ ಬಳುವಳಿಯಾಗಿ 32ಕೋಟಿ ರೂಪಾಯಿಗಳಲ್ಲಿ ಒಂದು ಹೃದ್ರೋಗದ ಆಸ್ಪತ್ರೆಯನ್ನು, ಸೂಪರ್ ಸ್ಪೆಷಲೈಜೇಷನ್‌ಗೆ ಸಂಬಂಧಪಟ್ಟಂತಹ ಆಸ್ಪತ್ರೆಯನ್ನು, ರಾಯಚೂರಿನಲ್ಲಿ ಈಗಾಗಲೇ ಶ್ರೀಮಾನ್ ಜೆ ಹೆಚ್ ಪಟೇಲ್‌ರವರು ಮುಖ್ಯಮಂತ್ರಿಗಳಾಗಿದ್ದಂತಹ ಕಾಲದಲ್ಲಿ, ಅದಕ್ಕಿಂತ ಪೂರ್ವದಲ್ಲಿ ಪ್ರಾರಂಭವಾಗಿದ್ದಂಥಾದ್ದು ಇದೆ, ಅಲ್ಲಿ ಉನ್ನತಮಟ್ಟದ ಮತ್ತೆ ವಿಶೇಷವಾದ ತರಬೇತಿಯನ್ನು, ಹೊಂದಿರುವಂತಹ ವೈದ್ಯರ ಅಭಾವವಿರುವುದರಿಂದ, ಅಘೊಲೋ ಆಸ್ಪತ್ರೆಯವರೊಂದಿಗೆ ಒಪ್ಪಂದವನ್ನು ಮಾಡಿಕೊಂಡು ಅದನ್ನು ಖಾಸಗೀಕರಣಕ್ಕೆ ಒಳಪಡಿಸಿರುವಂತಹ ಒಂದು ವ್ಯವಸ್ಥೆ ಇದೆ, ಹಾಗೆ ಮಾನ್ಯ ಡಿ ಆರ್ ಪಾಟೀಲ್ ಎನ್ನುವವರು ಬಹಳ ವರ್ಷಗಳಿಂದ "ಜಯದೇವ ಇನ್‌ಸ್ಟಿಟ್ಯೂಟ್" ಬರುವುದಕ್ಕೆ ಮುಂಚೆ ಹುಬ್ಬಳ್ಳಿಯಲ್ಲಿ ಕ್ಯಾನ್ಸರ್ ರೋಗಕ್ಕೆ ಸಂಬಂಧಪಟ್ಟಂತೆ ಆಸ್ಪತ್ರೆಯನ್ನು ಈಗಾಗಲೇ ಮಾಡಿದ್ದಾರೆ, ಈಗ ನಮ್ಮ ಎಲ್ಲಾ ಜಿಲ್ಲಾ ಆಸ್ಪತ್ರೆಗಳಲ್ಲೂ ಕೂಡ, Cobalt Rays ಅನ್ನು ಕೊಡುವಂತಹ ವ್ಯವಸ್ಥೆಗೆ ಮಾಣ್ಯ ಎ ಬಿ ಮಲಕರೆಡ್ಡಿ ಮಂತ್ರಿಗಳಾಗಿದ್ದಂತಹ ಸಂದರ್ಭದಲ್ಲಿ, ಹಣಕಾಸನ್ನು ಒದಗಿಸಿಕೊಟ್ಟಿದ್ದಾರೆ, ಆದರೆ ಅಲ್ಲಿಗೆ ಬೇಕಾದಂತಹ ವಿಶೇಷ ಏನಿದೆ, ಮುಂದೆ ಇದರ ಬಗ್ಗೆ ಸರ್ಕಾರ ತೀವ್ರವಾದಂತಹ ಗಮನವನ್ನು ಕೊಡುತ್ತದೆ, ತಾವು ಕೂಡ ಮಾಣ್ಯ ಮುಖ್ಯಮಂತ್ರಿಯವರೊಡನೆ ಮಾತನಾಡಿದರೆ ಈ ಸಮಸ್ಯೆ ಬಗೆಹರಿಯುತ್ತದೆ, ಎಂದು ನಾನು ಈ ಸಂದರ್ಭದಲ್ಲಿ ಸರ್ಕಾರದ ಪರವಾಗಿ ಹೇಳುತ್ತೇನೆ

ಶ್ರೀ ಜಿ ವಿ ಶ್ರೀರಾಂರೆಡ್ಡಿ ಮಾನ್ಯ ಅಧ್ಯಕ್ಷರೇ, ನಾನು ಕೇಳುವಂಥಾದ್ದು ಇದನ್ನು ಖಾಸಗಿಯವರ ಸಹಭಾಗಿತ್ವದಲ್ಲಿ ಮಾಡಿದರೆ, ಹಣ ಹೆಚ್ಚಿಗೆ ಒಡವರು ಖರ್ಚು ಮಾಡಬೇಕಾಗುತ್ತದೆ, ಇದು ಸಮಸ್ಯೆ ಇದೆ, ಇದನ್ನು ಕಡಿಮೆ ವೆಚ್ಚದಲ್ಲಿ, ವೈದ್ಯಕೀಯ ವ್ಯವಸ್ಥೆ ಇರುವಂತಹ ಸರ್ಕಾರಿ ಆಸ್ಪತ್ರೆಯನ್ನು, ಸರ್ಕಾರ ಸ್ಥಾಪನೆ ಮಾಡಬೇಕು, ಈಗ ಇದನ್ನು ಅಪೊಲೊ, ಇನ್ನಿತೆ ಖಾಸಗಿಯವರ ಸಹಭಾಗಿತ್ವದಲ್ಲಿ ಮಾಡುವುದರಿಂದ, ಹೆಚ್ಚಿಗೆ ಹಣವನ್ನು ತೆರಬೇಕಾಗುತ್ತದೆ, ಅದರಲ್ಲೂ ಬಡವರಿಗೆ ಇದು ಸಾಧ್ಯವಾಗುವುದಿಲ್ಲವೆಂಬುದು ತಮಗೂ ಗೊತ್ತಿದೆ, ಈಗ ಪ್ರೈವೇಟ್ ಆಸ್ಪತ್ರೆಗಳಲ್ಲಿ ಎಷ್ಟು ಹಣ ಖರ್ಚಾಗುತ್ತದೆಂಬುದು ಗೊತ್ತಿದೆ, ಅಷ್ಟು ಹಣವನ್ನು ಖರ್ಚು ಮಾಡುವಂತಹ ಶಕ್ತಿ ಉತ್ತರ ಕರ್ನಾಟಕದ ಜನತೆಗೆ ಇಲ್ಲ, ಅವರು ಆರ್ಥಿಕವಾಗಿ ಹಿಂದುಳಿದಿರುವಂತಹ ಜನರಾಗಿದ್ದಾರೆ, ಆದುದರಿಂದ ಅವರಿಗೆ ಸರ್ಕಾರವೇ ಕಡಿಮೆ ವೆಚ್ಚದಲ್ಲಿ ಅಂತಹ ಸೌಲಭ್ಯ ಸಿಗುವಂತಹ, ಆಸ್ಪತ್ರೆಯಾಗಬೇಕೆಂದು ಹೇಳುತ್ತಿರುವಂಥಾದ್ದು

ಶ್ರೀ ಎಂ ಪಿ ಪ್ರಕಾಶ್ ಮಾನ್ಯ ಅಧ್ಯಕ್ಷರೇ, ಮಾನ್ಯ ಸದಸ್ಯರು ಬಹಳ ಮಹತ್ವವಾದಂತಹ ಸಲಹೆಯನ್ನು ಕೊಟ್ಟಿದ್ದಾರೆ ಕರ್ನಾಟಕದಲ್ಲಿ ಯಾವ ಬಡವರಿಗೂ ಇಂತಹ ದುಬಾರಿಯಾದಂತಹ ಚಿಕಿತ್ಸೆಯನ್ನು ಮಾಡಿಕೊಳ್ಳುವುದಕ್ಕೆ ಸಾಧ್ಯವಾಗುವುದಿಲ್ಲ ಆ ಕಾರಣಕ್ಕೆ "ಯಶಸ್ವಿನಿ ಕಾರ್ಯಕ್ರಮ" ಇದೆ, ಇಲ್ಲಿ ಕೇವಲ 60 ರೂಪಾಯಿಗಳನ್ನು ಒಂದು ವರ್ಷಕ್ಕೆ ಕಟ್ಟಿದರೆ, ಈ ಕಾರ್ಯಕ್ರಮದಡಿಯಲ್ಲಿ, ನಾವು ಘೋಷಿಸಲ್ಪಟ್ಟಿರುವಂತಹ ಆಸ್ಪತ್ರೆಗಳಲ್ಲಿ, ಅವರು ಉಚಿತವಾಗಿ ಚಿಕಿತ್ಸೆಯನ್ನು ಪಡೆಯಬಹುದು, ಮತ್ತೆ ಮುಂದೆ ನಮ್ಮ ಮುಂದೆ ಇರತಕ್ಕಂಥ ಸಾಮಾನ್ಯ ಕಾರ್ಯಕ್ರಮಗಳ ಆಧಾರದ ಮೇಲೆ ಎರಡೂ ಪಕ್ಷಗಳು ಮಾತನಾಡುವಾಗ, ಹಿಂದೆ ನಾವು ನೂರು ಕೋಟಿ ರೂಪಾಯಿಗಳ

ನಿಧಿಯ ಮೂಲಕ ಇವರಿಗೆ ಹಳದಿ ಕಾರ್ಡ್‌ಗಳನ್ನು ಕೊಟ್ಟು ಆ ಚಿಕಿತ್ಸೆಯ ಭಾರವನ್ನು ಸರ್ಕಾರವೇ ತೆಗೆದುಕೊಳ್ಳಬೇಕೆಂಬ ಯೋಚನೆಯನ್ನು ಮಾಡುತ್ತಿದೆ, ಅದನ್ನು ನಾವು ಖಂಡಿತವಾಗಿ ನಿಮ್ಮ ಸಲಹೆಯ ಆಧಾರದ ಮೇಲೆ, ಆ ಯೋಜನೆಯನ್ನು ರೂಪಿಸುತ್ತೇವೆ

(ಉ) ವಿಷಯ ಜುರಾಲದಲ್ಲಿ ಹಳ್ಳಿಗಳು ಮುಳುಗಡೆಯಾಗಿರುವ ಬಗ್ಗೆ

ಶ್ರೀ ಎ ಪಾಪರೆಡ್ಡಿ (ರಾಯಚೂರು) ಮಾನ್ಯ ಅಧ್ಯಕ್ಷರೇ, ಜುರಾಲದಲ್ಲಿ 5 ಹಳ್ಳಿಗಳು ಮುಳುಗಡೆಯಾಗಿವೆ, ಎರಡು ದೇವಸ್ಥಾನಗಳು ಮುಳುಗಡೆಯಾಗಿವೆ, ನಾರದಗಟ್ಟ ದತ್ತಾತ್ರೇಯಾ ದೇವಸ್ಥಾನಗಳು ಮುಳುಗಡೆಯಾಗಿವೆ, ಇಲ್ಲಿಯವರೆಗೆ ಈ 5 ಹಳ್ಳಿಗಳಿಗೂ ಪುನರ್ವಸತಿಯನ್ನು ಕಲ್ಪಿಸಿಲ್ಲ, ಮತ್ತೆ ಜಿಲ್ಲಾಧಿಕಾರಿಗಳು ಪುನರ್ವಸತಿಗೆ ಬೇಕಾದಂತಹ ಎಲ್ಲಾ ಮಾಹಿತಿಯನ್ನು ಇಲ್ಲಿಗೆ ಕಳುಹಿಸಿಕೊಟ್ಟಿದ್ದಾರೆ, ಇದರ ಬಗ್ಗೆ ಇದುವರೆಗೂ ಏನು ಕ್ರಮವನ್ನು ತೆಗೆದುಕೊಂಡಿಲ್ಲ, ಇಲ್ಲಿ ದೇವಸ್ಥಾನಗಳಿಗೆ ಹೋಗುವುದಕ್ಕೆ ದಾರಿ ಇಲ್ಲ, ಲಕ್ಷಾಂತರ ಭಕ್ತಾದಿಗಳು ಹೋಗುತ್ತಿದ್ದಾರೆ, ಅಲ್ಲಿ ದಾರಿ ಇಲ್ಲ, ಇದಕ್ಕೆ ಬ್ರಿಡ್ಜ್ ಕಟ್ಟಿಕೊಡುತ್ತೇವೆಂದು ಆಗ್ರಿಮೆಂಟ್ ಆಗಿದೆ, ಆಂಧ್ರ ಪ್ರದೇಶದ ಮತ್ತು ಕರ್ನಾಟಕ ಸರ್ಕಾರದಿಂದ ಇಲ್ಲಿಯವರೆಗೂ ಯಾವ ಕಾರ್ಯಕ್ರಮಗಳು ಆಗಲಿಲ್ಲ, ಆ ಕ್ಷೇತ್ರದಲ್ಲಿರುವಂತಹ ಜನರು ದೇವಸ್ಥಾನಗಳಿಗೆ ಹೋಗುವುದಕ್ಕೆ ತೊಂದರೆಯಾಗಿದೆ, ಆದುದರಿಂದ ಈ 5 ಹಳ್ಳಿಗಳ ಜನರಿಗೆ ಪುನರ್ವಸತಿಯನ್ನು ಕಲ್ಪಿಸಿಕೊಡಬೇಕೆಂದು, ನಾನು ತಮ್ಮ ಮುಖಾಂತರ ಮಾನ್ಯ ಮಂತ್ರಿಯವರನ್ನು ಕೇಳಿಕೊಳ್ಳುತ್ತೇನೆ

ಶ್ರೀ ಎಂ ಪಿ ಪ್ರಕಾಶ್ (ಕಂದಾಯ ಮತ್ತು ಸಂಸದೀಯ ವ್ಯವಹಾರಗಳ ಸಚಿವರು) ಮಾನ್ಯ ಅಧ್ಯಕ್ಷರೇ, ಈಗಾಗಲೇ ಪುನರ್ವಸತಿಯ ವಿಚಾರದಲ್ಲಿ, ಜುರಾಲದಿಂದ ಬರುವಂಥಾದ್ದು ಗೋದಾವರಿ ಕಣವೆಗೆ ಸೇರಿರುವುದರಿಂದ ಅದರಲ್ಲಿ ಸ್ವಲ್ಪ ಭಿನ್ನಾಭಿಪ್ರಾಯವಿದೆ, ಹಿನ್ನೀರನ್ನು ಆಂಧ್ರಪ್ರದೇಶದವರು ಬಳಸುವಂಥಾದ್ದು ಅದು ಅವರ ಹಕ್ಕು, ವಿದ್ಯುಚ್ಛಕ್ತಿ ಉತ್ಪಾದನೆಯಲ್ಲಿ ನಮ್ಮ ಪಾಲು ಇದೆ ಇಲ್ಲಿ ಪುನರ್ವಸತಿಯನ್ನು ಮಾಡುವುದಕ್ಕೆ ಆಂಧ್ರ ಪ್ರದೇಶದವರು ದುಡ್ಡು ಕೊಡಬೇಕೆಂಬ ಮಾತು ಇದೆ, ದಿವಂಗತ ದೇವರಾಜ್ ಅರಸುರವರ ಕಾಲದಲ್ಲಿ ಈ ಒಪ್ಪಂದ ಆಗಿದೆ, ಇಲ್ಲಿ ಎರಡು ದೊಡ್ಡ ಸೇತುವೆಗಳನ್ನು ಕಟ್ಟಿಸಿಕೊಡಬೇಕೆಂದು ಇದೆ, ಆ ಕಾರಣಕ್ಕಾಗಿ ಈಗಾಗಲೇ ವಿಶೇಷವಾದಂತಹ ಕರ್ತವ್ಯಗಳನ್ನು ನಾವು ಅವರಿಗೆ ಇಟ್ಟುಕೊಂಡಿದ್ದೇವೆ, ಈಗ ತಾವು ಏನು ಹೇಳಿದ್ದೀರಿ, ಅದಕ್ಕೆ ನಾವು ಕೃಷ್ಣ ಮೇಲ್ದಂಡೆ ಯೋಜನೆಯಲ್ಲಿ ಯಾವ ರೀತಿಯಾಗಿ ಪುನರ್ವಸತಿ ಯೋಜನೆಯನ್ನು ರೂಪಿಸಿದ್ದೀರಿ, ಅದೇ ರೀತಿಯಲ್ಲಿ ಇಲ್ಲೂ ರೂಪಿಸುತ್ತೇವೆ, ಈಗ ತಾವು ಏನು ಆತಂಕಕ್ಕೆ ಒಳಪಟ್ಟಿದ್ದೀರಿ, ತಾವು ಇಷ್ಟು ದಿವಸ ಏನು ಕಷ್ಟಗಳನ್ನು ಅನುಭವಿಸಿದ್ದೀರಿ, ಅದು ಪರಿಹಾರವಾಗುತ್ತೆದೆಂಬ ಮಾತನ್ನು ಹೇಳಲಿಚ್ಛಿಸುತ್ತೇನೆ ಈಗ ಅಲ್ಲಿರುವಂಥ ಆಂಧ್ರಪ್ರದೇಶದ ಸರ್ಕಾರದ ಜೊತೆಯಲ್ಲಿ ಇಲ್ಲಿ ಇರುವಂತಹ ಸಮ್ಮಿಶ್ರ ಸರ್ಕಾರದ ನಮ್ಮ ಮಾನ್ಯ ಮುಖ್ಯಮಂತ್ರಿಯವರು, ಮಾತನಾಡಿ , ಆ ಸೇತುವೆ ಕಟ್ಟುವ ವಿಚಾರ ಹಾಗೂ ಪುನರ್ವಸತಿಗೆ ಹಣವನ್ನು ಬಿಡುಗಡೆ ಮಾಡುವ ಬಗ್ಗೆ ನಾವು ಒತ್ತಾಯ ಮಾಡಿ, ಕೆಲಸವನ್ನು ಪ್ರಾರಂಭ ಮಾಡುತ್ತೇವೆ

ಶ್ರೀ ಸಿದ್ದುಸಾವದಿ ಮಾನ್ಯ ಅಧ್ಯಕ್ಷರೇ, ಇಂದಿನ ಕಾರ್ಯಕಲಾಪಗಳ ಪಟ್ಟಿ ಯಲ್ಲಿರುವಂತಹ ಕೈಮಗ್ಗ ನೇಕಾರರ ವಿಷಯವಾಗಿ ನಿಯಮ 69ರ ಮೇಲೆ ಚರ್ಚೆಸಲು ತಾವು ಅವಕಾಶವನ್ನು ಕೊಟ್ಟಿದ್ದೀರಿ, ರಾಜ್ಯದಲ್ಲಿ 1975ರಲ್ಲಿ ಕೈಮಗ್ಗ ಕೈಗಾರಿಕೆಯನ್ನು ಅಭಿವೃದ್ಧಿ ಪಡಿಸಲು, ಅದನ್ನು ಘೋಷಿಸಲು, ಅದರಲ್ಲೂ ವಿಶೇಷವಾಗಿ ಕೈಮಗ್ಗ ನೇಕಾರರ ಆರ್ಥಿಕ ಸ್ಥಿತಿಯನ್ನು ಉತ್ತಮಪಡಿಸಲು.. ..